## ಗ್ರಾಮೀಣ ಕ್ರೀಡಾ ಶಿಕ್ಷಕರಿಗೆ ಸಂಬಳ ಪಾವತಿ ಬಗ್ಗೆ

೨೧೪೮ ಶ್ರೀ ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಗಣಿ ಹಾಗೂ ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಎ) ರಾಜ್ಯದ ತಾಲ್ಲೂಕುಗಳಿಗೆ ಮಂಜೂರಾದ ಗ್ರಾಮಾಂಣ ಕ್ರೀಡಾ ಕೇಂದ್ರಗಳ ಶಾರೀರಕ ಶಿಕ್ಷಕರಿಗೆ ಕಳೆದ ಮೂರು ವರ್ಷಗಳಿಂದ ಮಾಸಿಕ ಸಂಭಾವನೆ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಅ) ಈ ಮಾಸಿಕ ಸಂಭಾವನೆ ನೀಡುವುದು ಕೇಂದ್ರ ಸರ್ಕಾರವೇ ಅಥವಾ ರಾಜ್ಯ ಸರ್ಕಾರವೇ?

(ಇ) ರಾಜ್ಯ ಸರ್ಕಾರ ಪಾವತಿ ಮಾಡುತ್ತಿದ್ದಲ್ಲಿ ಶಿಕ್ಷಕರ ಸಂಭಾವನೆಯನ್ನು ಪಾವತಿ ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಆರ್. ಸಿ. ಜಿಗಜಿಣಗಿ (ಗಣಿ ಹಾಗೂ ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು).—

(ಎ) ಹೌದು

(ಅ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಭರಿಸುತ್ತದೆ

(ಇ) ಕೇಂದ್ರ ಸರ್ಕಾರದಿಂದ ಇದಕ್ಕೆ ಧನ ಸಹಾಯ ಮಂಜೂರಾತಿ ತಡವಾಗಿರುವುದರಿಂದಲೂ ಮತ್ತು ರಾಜ್ಯ ಸರ್ಕಾರದಿಂದ ಕೊಡುವ ಸಮಮೊತ್ತದ ಹಣವನ್ನು ರಾಜ್ಯ ಸರ್ಕಾರದಲ್ಲಿ ಆರ್ಥಿಕ ಮುಗ್ಗಟ್ಟಿನ ಕಾರಣ ಸಂಭಾವನೆ ಕೊಡುವುದರಲ್ಲಿ ವಿಳಂಬನೆಯಾಗಿದೆ.

## ತಾಲ್ಲೂಕು ಸಹಾಯಕ ಕ್ರೀಡಾಧಿಕಾರಿಗಳ ವೇತನ ಪರಿಷ್ಕರಣದ ಬಗ್ಗೆ

೨೧೪೯ ಶ್ರೀ ವಸಂತ ಬಂಗೇರ.—ಮಾನ್ಯ ಗಣಿ ಹಾಗೂ ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ತಾಲ್ಲೂಕುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಯವರ ಪೂರ್ಣ ವೇತನವನ್ನು ಪ್ರತಿ ವರ್ಷ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ ನಂತರ ರಾಜ್ಯ ಸರ್ಕಾರವು ಪಾವತಿ ಮಾಡುವುದು ನಿಜವೇ ?

೨. ಈ ಅಧಿಕಾರಿಗಳು ೨೫ ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದರೂ ಇವರ ವೇತನದ ಪರಿಷ್ಕರಣ ಮಾಡದಿರಲು ಕಾರಣವೇನು ?

೩. ಕೇಂದ್ರ ಸರ್ಕಾರದವರು ಈ ಅಧಿಕಾರಿಗಳ ವೇತನ ನಿಗಧಿಪಡಿಸಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ತಿಳಿಸಿದ್ದರೂ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಆರ್. ಸಿ. ಜಿಗಜಿಣಗಿ (ಗಣಿ ಹಾಗೂ ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು).—

೧. ತಾಲ್ಲೂಕುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಯವರ ವೇತನವನ್ನು ರಾಜ್ಯ ಸರ್ಕಾರವು ಪ್ರತಿ ತಿಂಗಳು ಪಾವತಿ ಮಾಡಿದ ನಂತರ ಕೇಂದ್ರ ಸರ್ಕಾರವು ವರ್ಷಕ್ಕೆ ಒಮ್ಮೆ ಅನುದಾನ (ಗ್ರಾಂಟ್ ಇನ್ ಏಡ್) ಮೂಲಕವಾಗಿ ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡುತ್ತದೆ.